<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

<u>**SC No**.131/2020</u>

**PW**. 7

**CW**. 12

**ಸಾಕ್ಷಿಯ ಹೆಸರು –ಎಸ್ ಎನ್ ಸೋಮಶೇಖರ**

**ತಂದೆಯ ಹೆಸರು –ಲೇ ನಿಂಗಪ್ಪ**

**ವಯಸ್ಸು –68 ವರ್ಷಗಳು** ದಿನಾಂಕ <u>17–11–2025</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ನಿವೃತ್ತ , ಎ ಎಸ್ ಐ**

**ವಾಸಸ್ಥಳ –ಸುಬ್ಬಯ್ಯನ ಕೊಪ್ಪಲು , ಪಿರಿಯಾಪಟ್ಟಣ ತಾಃ**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ನಾನು ದಿಃ 26–06–2013 ರಿಂದ ದಿಃ 29–06–2016 ರವರೆಗೆ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಸೇವೆ ಸಲ್ಲಿಸಿದ್ದೇನೆ. ನವೆಂಬರ್ 2014 ರಲ್ಲಿ ಚಾಸಾ–1 ನಮ್ಮ ಠಾಣೆಯಲ್ಲಿ ಪಿ ಎಸ್ ಐ ಆಗಿದ್ದರು.

ದಿಃ 10–02–2014 ರ ರಾತ್ರಿ ನಾನು, ಚಾಸಾ–1 ಹಾಗೂ ಇತರೆ ಠಾಣೆ ಸಿಬ್ಬಂದಿಗಳಾದ ಚಾಸಾ–9 ರಿಂದ 11 ರವರ ಜೊತೆ ರಾತ್ರಿ ಗಸ್ತು ಕರ್ತವ್ಯದಲ್ಲಿದ್ದಾಗ, ರಾತ್ರಿ 10.30 ಗಂಟೆಗೆ ಠಾಣೆಯನ್ನು ಬಿಟ್ಟು ಸುಮಾರು 11.45 ಗಂಟೆಗೆ ಕೆ ಆರ್ ನಗರ ರಸ್ತೆಯ ಜಂಕ್ಷನ ಬಳಿ ಅನುಮಾಸ್ಪದ ವಾಹನಗಳನ್ನು ತಡೆದು ತಪಾಸಣೆ ಮಾಡುತ್ತಿದ್ದೆವು. ಆಗ ಹುಣಸೂರು ಕಡೆಯಿಂದ ಮೈಸೂರು ಕಡೆಗೆ ಒಂದು ಕಾರ ನಂ ಕೆ 45 5412 ಅನ್ನು ಒಬ್ಬ ಚಾಲಕ ಚಲಾಯಿಸಿಕೊಂಡು ಬರುತ್ತಿದ್ದ. ಸದರಿ ಕಾರನ್ನು ನಿಲ್ಲಿಸಲು ಸೂಚನೆ ನೀಡಿದಾಗ , ಆತ ಅತಿವೇಗವಾಗಿ ಕಾರನ್ನು ಕೆ ಆರ್ ನಗರ ಕಡೆಗೆ ಚಾಲನೆ ಮಾಡಿಕೊಂಡು ಹೋದನು. ನಾವು ಅನುಮಾನಗೊಂಡು ಸದರಿ ಕಾರನ್ನು

ಹಿಂಬಾಲಿಸಿ , ಕೆ ಆರ್ ನಗರ ರಸ್ತೆಯ ಬೋಳನಹಳ್ಳಿ ಗ್ರಾಮದ ಸದರಿ ಕಾರನ್ನು ತಡೆದು ನಿಲ್ಲಿಸಿದಾಗ ಸದರಿ ಚಾಲಕ ಕಾರಿನಿಂದ ಇಳಿದು ಓಡಿ ಹೋಗಲು ಪ್ರಯತ್ನಪಟ್ಟ . ಆಗ ನಾವೆಲ್ಲ ಸುತ್ತುವರಿದು , ಅತನನ್ನು ಹಿಡಿದು , ವಿಚಾರಿಸಲಾಗಿ ಆತನ ತನ್ನ ಹೆಸರು ಮತ್ತು ವಿಳಾಸವನ್ನು ಸ್ಪಷ್ಟವಾಗಿ ಹೇಳಲಿಲ್ಲ. ನಂತರ ವಿಚಾರಿಸಲಾಗಿ ಆತನ ಹೆಸರು ನಯಾಜ್ ಶರೀಫ್ ಎಂದು ಹೇಳಿದ. ಸದರಿ ಕಾರನ್ನು ಪರೀಕ್ಷಿಸಲಾಗಿ ಅದರಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದ. ಆ ಬಗ್ಗೆ ಯಾವುದೇ ಪರವಾಣಿಗೆ ಹಾಜರು ಮಾಡಲಿಲ್ಲ. ನಂತರ ಪಿ ಎಸ್ ಐ ರವರು ಆರೋಪಿ ಮತ್ತು ಕಾರನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಬಂದರು. ಠಾಣೆಯಲ್ಲಿ ಕಾರಿನಲ್ಲಿದ್ದ ವಸ್ತುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿ, ಪಂಚನಾಮೆ ಮಾಡಿದರು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನಿಪಿ–3 ರಿಂದ 7 ಎಂದು ಗುರುತಿಸಲಾಗಿದೆ. ಸದರಿ ಕಾರನ್ನು ನಿಪಿ–9 ರ ಫೋಟೋದಲ್ಲಿ ನೋಡಿ ಗುರುತಿಸುತ್ತೇನೆ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಎನ್ ಪಿ ವಕೀಲರಿಂದಃ–**

ದಿಃ 10–02–2014 ರಂದು ರಾತ್ರಿ ನಾವು ಗಸ್ತು ಕರ್ತವ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯ ಕಾರನ್ನು ತಡೆದು ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ತನ್ನ ಕಾರಿನಲ್ಲಿ ಸ್ಫೋಟಕ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿದ್ದ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಿಲ್ಲ ಹಾಗೂ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.